**ಓ.ಎಸ್. ನಂಃ 560/2023**

**ಡಿ.ಡಬ್ಲ್ಯೂಃ 1**

**ದಿನಾಂಕ 18.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃಶ್ರೀ ಪಿ.ಡಿ. ವಕೀಲರಿಂದಃ**

1. ಬಾರ್, ಸಾ-ಮಿಲ್, ವಾಣಿಜ್ಯ ಮಳಿಗೆ ಇವೆಲ್ಲಾ ನನ್ನ ತಂದೆಯಾದ ಅಪ್ಪಾಜಿಗೌಡರ ಹೆಸರಿನಲ್ಲಿರುತ್ತದೆ. ನಿಪಿ-1 ರ ಚೆಕ್ ಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ನನ್ನ ತಂದೆಯಾದ ಅಪ್ಪಾಜಿಗೌಡರ ವಿರುದ್ಧ ಸಿಸಿ 2183/2022 ರ ಚೆಕ್ ಬೌನ್ಸ್ ನಡೆದಿತ್ತು ಎಂದರೆ ಸರಿ. ಸದರಿ ಸಿಸಿ 2183/2022 ರ ಚೆಕ್ ಬೌನ್ಸ್ ಪ್ರಕರಣ ಹೂಡವ ಪೂರ್ವವದಲ್ಲಿ ವಾದಿಯು ನಿಪಿ-3 ರ ನೋಟಿಸ್ ಅನ್ನು ನನ್ನ ತಂದೆಯಾದ ಅಪ್ಪಾಜಿಗೌಡರಿಗೆ ಕಳುಕಹಿಸಿದ್ದರು ಎಂದರೆ ಸರಿ. ನಿಪಿ-3 ರ ನೋಟಿಸ್ ಗೆ ನನ್ನ ತಂದೆಯಾದ ಅಪ್ಪಾಜಿಗೌಡರು ಯಾವುದೇ ಪ್ರತ್ಯುತ್ತರ ನೋಟಿಸ್ ಅನ್ನು ಕಳುಹಿಸಿರಲಿಲ್ಲ ಎಂದರೆ ಸರಿ.

2. ಸದರಿ ಸಿಸಿ 2183/2022 ರ ಚೆಕ್ ಬೌನ್ಸ್ ಪ್ರಕರಣದ ಸಮನ್ಸ್ ಜಾರಿಯಾದಗ ನಿಮ್ಮ ತಂದೆಯಾದ ಅಪ್ಪಾಜಿಗೌಡರು ಶ್ರೀ.ಕೆ.ಎನ್.ಸತೀಶ್ ವಕೀಲರ ಮೂಲಕ ಸದರಿ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿದ್ದರೂ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಮದುವೆಯಾಗಿ ಗಂಡನ ಮನೆಯಲ್ಲಿ ಇದ್ದ ಕಾರಣ ನಮಗೆ ಸಿಸಿ 2183/2022 ರ ಚೆಕ್ ಬೌನ್ಸ್ ಪ್ರಕರಣದ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

3. ಸಾಕ್ಷಿಗೆ ಈಗ ಸಿಸಿ 2183/2022 ರ ಪ್ರಕರಣದಲ್ಲಿ ದೋಷಾರೋಪಣೆ ಮತ್ತು ಸಿ.ಆರ್.ಪಿ.ಸಿ ಕಲಂ 313 ರ ಹೇಳಿಕೆಯ ದೃಡೀಕೃತ ನಕಲುಗಳನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ತಂದೆಯಾದ ಅಪ್ಪಾಜಿಗೌಡರ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿಪಿ-24 ಮತ್ತು ನಿಪಿ-25 ಎಂದು ಗುರುತಿಸಲಾಯಿತು. ಸಿಸಿ 2183/2022 ರ ಚೆಕ್ ಬೌನ್ಸ್ ಪ್ರಕರಣದ ಅಂತಿಮ ವಾದ ಮಂಡನೆಗೆ ಇದ್ದಾಗ ನನ್ನ ತಂದೆಯಾದ ಅಪ್ಪಾಜಿಗೌಡರು ಮರಣ ಹೊಂದಿರುತ್ತಾರೆ ಎಂದರೆ ಸರಿ.

4. ನನ್ನ ತಂದೆಯವರು ಕೆ.ಎನ್. ಸತೀಶ್ ರವರಿಗೆ ಕೊಟ್ಟ ಮಾಹಿತಿಯ ಪ್ರಕಾರವೇ ಸಿಸಿ 2183/2022 ರ ಪ್ರಕರಣದಲ್ಲಿ ನನ್ನ ತಂದೆಯ ಪರ ವಕೀಲರು ಈ ದಾವೆಯ ವಾದಿಯನ್ನು ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಿಸಿ 2183/2022 ರ ಪ್ರಕರಣದಲ್ಲಿ ನನ್ನ ತಂದೆಯವರು ಈ ದಾವೆಯ ವಾದಿಯ ಪಾಟೀ ಸವಾಲಿನಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷೆಗೂ ಹಾಗೂ ಈ ದಾವೆಯಲ್ಲಿ ನಾವು ತೆಗೆದುಕೊಂಡಿರುವ ಪ್ರತಿರಕ್ಷೆಗೂ ವ್ಯತ್ಯಾಸ ಇದೆ ಎಂದರೆ ಸರಿ. ಸಿಸಿ 2183/2022 ರ ಪ್ರಕರಣದಲ್ಲಿ ಮಾಡಿದ ಈ ದಾವೆಯ ವಾದಿಯ ಪಾಟೀ ಸವಾಲಿನ ಸಾಕ್ಷ್ಯದ ದೃಡೀಕೃತ ನಕಲನ್ನು ನಿಪಿ-26 ಎಂದು ಗುರುತಿಸಲಾಯಿತು.

5. ನನ್ನ ತಂದೆಗೆ ಸೇರಿದ ಬಾರ್, ಸಾ-ಮಿಲ್ ಮತ್ತು ವಾಣಿಜ್ಯ ಮಳಿಗೆಗಳ ಸಂಬಂದ ಯಾವುದೇ ದುರಸ್ಥಿ ಕೆಲಸಗಳಿದ್ದರೆ ಅದನ್ನು ನನ್ನ ತಂದೆಯವರೇ ಮಾಡಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರಿಗೆ ಮದ್ಯಪಾನದ ಚಟವಿದ್ದ ಬಗ್ಗೆ ನನ್ನ ತಂದೆಯವರಾಗಲೀ ಅಥವಾ ಅವರ ವಕೀಲರಾಗಲೀ ಸಿಸಿ 2183/2022 ರ ಪ್ರಕರಣದಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರಿಗೆ ಮದ್ಯಪಾನದ ಚಟ ಇದ್ದದ್ದು ನಿಜ ಎಂದು ಸ್ವತಃ ನುಡಿದಿರುತ್ತಾರೆ.

6. ವಾದಿಯ ಗಂಡನಾದ ಮಂಜುನಾಥ ರವರು ನಿಪಿ-1 ರ ಚೆಕ್ ಅನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನನ್ನ ತಂದೆಯವರು ಸಿಸಿ 2183/2022 ರ ಪ್ರಕರಣದಲ್ಲಿ ಪ್ರತಿರಕ್ಷೆ ತೆಗೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಾವಾಗಲೀ ಅಥವಾ ನಮ್ಮ ತಂದೆಯಾಗಲೀ ವಾದಿ ಹಾಗೂ ಅವರ ಗಂಡನ ವಿರುದ್ಧ ಇಲ್ಲಿಯವರೆವಿಗೂ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ.

7. ವಾದಿಯ ಗಂಡನಾದ ಮಂಜುನಾಥ ರವರು ನಿಪಿ-1 ರ ಚೆಕ್ ಅನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನಿಮಗೆ ಯಾರು ತಿಳಿಸಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿಯ ಗಂಡನಾದ ಮಂಜುನಾಥ ರವರು ನನ್ನ ತಂದೆಯ ಸಾ-ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ವಾದಿಯ ಗಂಡನಾದ ಮಂಜುನಾಥ ರವರು ನಿಮ್ಮ ತಂದೆಯ ಸಾ-ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನಿಮ್ಮ ಬಳಿ ದಾಖಲೆಗಳು ಇದೆಯೇ ಎಂದು

ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಾ-ಮಿಲ್ ನಲ್ಲಿ ಹಲವಾರು ಜನರು ಕೆಲಸ ಮಾಡುತ್ತಾರೆ ಹಾಗೂ ಅದರ ಬಗ್ಗೆ ನಾವು ದಾಖಲೆಗಳನ್ನು ಇಟ್ಟುಕೊಳ್ಳುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆಯವರು ಸಾ-ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಹೆಸರಿನ ಪಟ್ಟಿಯನ್ನು ಕಾರ್ಮಿಕ ಇಲಾಖೆಗೆ ಸಲ್ಲಿಸುತ್ತಿರಲಿಲ್ಲ.

8. ನನ್ನ ತಂದೆಯಾದ ಅಪ್ಪಾಜಿಗೌಡರ ಮರಣದ ನಂತರ ಅವರ ಎಲ್ಲಾ ಆಸ್ತಿಗಳಿಗೆ ನಾವೇ ವಾರಸುದಾರರಾಗಿರುತ್ತೇವೆ ಎಂದರೆ ಸರಿ. ಸಿಸಿ 2183/2022 ರ ಪ್ರಕರಣದಲ್ಲಿ ನನ್ನ ತಂದೆಯವರು ತೆಗೆದುಕೊಂಡಿದ್ದ ಪ್ರತಿರಕ್ಷೆಗೆ ತದ್ವರುದ್ದವಾಗಿ ನಾವು ಈ ದಾವೆಯಲ್ಲಿ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ಮಾಡಿರುವ ಸಾಲಗಳನ್ನು ತೀರಿಸುವ ಜವಾಬ್ದಾರಿ ನಮ್ಮ ಮೇಲೆ ಇರುವ ಕಾರಣ ಸದರಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾವು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

9. ನನ್ನ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ನಿಪಿ-3 ರ ನೋಟಿಸ್‌ಗೆ ಪ್ರತ್ಯುತ್ತರ ನೋಟಿಸ್ ಅನ್ನು ನೀಡದಿದ್ದರೂ ಸಹ ನನ್ನ ತಂದೆಯವರ ಮರಣದ ನಂತರ ನಾವು ನಿಪಿ-16 ರ ನೋಟಿಸ್‌ಗೆ ಸುಳ್ಳು ಪ್ರತ್ಯುತ್ತರ ನೋಟಿಸ್ ಅನ್ನು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ನನ್ನ ತಂದೆಯವರ ದೂರದ ಸಂಬಂಧಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮಗೆ ವಾದಿಯ ಪರಿಚಯವಿಲ್ಲ ಎಂದು ಸ್ವತಃ ನುಡಿದಿರುತ್ತಾರೆ. ವಾದಿಯು ನನ್ನ ತಂದೆಯ ಸಂಬಧಿಕರಾಗಿದ್ದ ಕಾರಣ ನನ್ನ ತಂದೆಯವರು ವಾದಿಯಿಂದ ನಾಲ್ಕು ಲಕ್ಷ ರೂಪಾಯಿ ಸಾಲವನ್ನು ಪಡೆದು ಅದರ ಮರುಪಾವತಿಗಾಗಿ ನಿಪಿ-1 ರ ಚೆಕ್ ನ್ನು ವಾದಿಗೆ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರ ಆಸ್ತಿಗಳಿಂದ ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ಮಾಡಿರುವ ಸಾಲಗಳನ್ನು ತೀರಿಸುವ ಜವಾಬ್ದಾರಿ ನಮ್ಮ ಮೇಲೆ ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**

**ನ್ಯಾಯಾಧೀಶರು, ಕೆ.ಆರ್.ನಗರ.**